ಸಾವಿನ ನಂತರ ಏನಾಗುತ್ತದೆ? ಅಂತ್ಯಸಂಸ್ಕಾರ ಆಗುತ್ತದೆ ಎಂದು ಲಘುವಾಗಿ ಹೇಳಿ ಬಿಡಬಹುದು. ವಾಸ್ತವದಲ್ಲಿ ಅದೇ ಆಗುತ್ತದೆ ಎನ್ನುವುದು ನಿಜ ಕೂಡ. ಕೆಲವರನ್ನು ಹೂಳುತ್ತಾರೆ. ಇನ್ನು ಕೆಲವರನ್ನು ದಹನ ಮಾಡುತ್ತಾರೆ. ಪ್ರಧಾನವಾಗಿ ನಡೆಯುವ ಅಂತ್ಯಸಂಸ್ಕಾರದ ಎರಡು ವಿಧಿಗಳು ಇವು. ಇನ್ನು ಕೆಲವರು ದೇಹ ದಾನ ಮಾಡಬಹುದು. ಮತೆ ಕೆಲವರ ದೇಹವನ್ನು, ಪಾರಸಿಗಳ ಹಾಗೆ, ಪಂಚಭೂತಗಳಿಗೆ ಅರ್ಪಿಸಬಹುದು.


ನಾವು ಬದುಕಿ ಬಾಳುವ ಜಾಗ ಹೇಗಿರಬೇಕು ಎಂದು ಬಯಸುವ ಮತ್ತು ಅದಕ್ಕೆ ತಕ್ಕ ಹಾಗೆ ಸಜ್ಜು ಮಾಡಿಕೊಳ್ಳುವ ಆಯ್ಕೆ ನಮಗಿದೆ. ಆದರೆ ನಮ್ಮ ಅಂತ್ಯಸಂಸ್ಕಾರ ಹೇಗೆ ನಡೆಯಬೇಕು ಎಂದು ಆಯ್ಕೆ ಮಾಡಿಕೊಳ್ಳುವುದು ಅನೇಕ ಸಾರಿ ನಮ್ಮ ಕೈಯಲ್ಲಿ ಇರುವುದಿಲ್ಲ. ನಮ್ಮ ಪ್ರಾಣ ಎಲ್ಲಿ ಮತ್ತು ಹೇಗೆ ಹೋಗುತ್ತದೆ ಎನ್ನುವುದೇ ನಮಗೆ ಗೊತ್ತಿರುವುದಿಲ್ಲ. ಆದರೂ ಅಂತ್ಯಸಂಸ್ಕಾರ ಹೇಗೆ ನಡೆಯಬೇಕು ಎನ್ನುವುದಕ್ಕೆ ಅನೇಕ ವಿಧಿ ವಿಧಾನಗಳು ಇವೆ. ಸತ್ತ ಜೀವ ಮರಳಿ ಹುಟ್ಟುತ್ತದೆ ಎನ್ನುವ ನಂಬಿಕೆ ಇದಕ್ಕೆ ಕಾರಣವಾಗಿರಬಹುದು. ಅತ್ಯಂತ ಪೂಜ್ಯ ಭಾವನೆಯಿಂದ ಅಂತಿಮ ಸಂಸ್ಕಾರಗಳನ್ನು ನಡೆಸುತ್ತೇವೆ, ಪೂಜೆ ಪುನಸ್ಕಾರ ಮಾಡಿ ಬೀಳ್ಕೊಡುತ್ತೇವೆ. ಇದ್ದುಳ್ಳವರು ಗಂಧದ ಕಟ್ಟಿಗೆಯಲ್ಲಿ ಅಂತ್ಯಸಂಸ್ಕಾರ ಮಾಡುತ್ತಾರೆ. ಸೀಮೆಎಣ್ಣೆ ಅಥವಾ ಡೀಸಲ್ ಹಾಕಿದರೆ ಬೆಂಕಿ ಬೇಗ ಹತ್ತಿಕೊಳ್ಳುತ್ತದೆ ಎಂದು ಗೊತ್ತಿದ್ದರೂ ಸ್ವಲ್ಪವಾದರೂ ಆಜ್ಯವನ್ನು ಸುರಿಯುತ್ತಾರೆ. ಟೈರ್, ಟ್ಯೂಬ್ ಹಾಕಬೇಡಿ ಎಂದು ಗೋಗರೆಯುತ್ತಾರೆ. ಹೀಗೆಲ್ಲ ಗೌರವಪೂರ್ವಕವಾಗಿ ಅಂತ್ಯಸಂಸ್ಕಾರ ನಡೆದರೂ ಅದು ನಡೆಯುವ ಜಾಗ ಹೇಗಿರಬೇಕು ಎಂಬುದನ್ನು ನಾವು ಆಯ್ಕೆ ಮಾಡಿಕೊಳ್ಳಲು ಆಗದು. ನಮ್ಮ ಊರಿನ ಸ್ಮಶಾನಕ್ಕೆ ಶವವನ್ನು ತೆಗೆದುಕೊಂಡು ಹೋಗಿ ಅಗ್ನಿಸ್ಪರ್ಶ ಮಾಡುತ್ತೇವೆ ಅಥವಾ ದಫನ್ ಮಾಡುತ್ತೇವೆ.

ಈಚೆಗೆ ನಾನು ನನ್ನ ಹತ್ತಿರದ ಮೂವರು ಬಂಧುಗಳನ್ನು ಕಳೆದುಕೊಂಡೆ. ಇಬ್ಬರ ಅಂತ್ಯಸಂಸ್ಕಾರದಲ್ಲಿ ಭಾಗವಹಿಸಿದ್ದೆ. ಇನ್ನೊಂದು ಅಂತ್ಯಸಂಸ್ಕಾರ ನಡೆದ ಜಾಗಕ್ಕೆ ಹೋಗಿದ್ದೆ. ಆಗ, ಸ್ಮಶಾನ, ರುದ್ರಭೂಮಿ ಅಥವಾ ಚಿತಾಗಾರಗಳನ್ನು ನಾವು ಇಟ್ಟುಕೊಂಡಿರುವ ರೀತಿ ಅಥವಾ ನಿರ್ವಹಿಸುವ ರೀತಿ ಎಷ್ಟು ಭಯಾನಕವಾಗಿದೆ ಎಂದು ನೋಡಿ ಗಾಬರಿಯಾಯಿತು. ಸರ್ಕಾರ ಈ ಕುರಿತು ಕಿಂಚಿತ್ ಕೂಡ ಆಲೋಚನೆ ಮಾಡಿಲ್ಲ ಎಂದು ಅನಿಸಿ 'ಈ ತಾತ್ಸಾರ ನ್ಯಾಯವೇ' ಎಂದು ಮನಸ್ಸು ಮಮ್ಮಲ ಮರುಗಿತು. ಇಬ್ಬರು ಅಕ್ಕಂದಿರು ಮತ್ತು ಒಬ್ಬ ಬಾವ ಈ ಅವಧಿಯಲ್ಲಿ ಅಸುನೀಗಿದ್ದರು. ಒಬ್ಬರು ರಾಮದುರ್ಗದಲ್ಲಿ ತೀರಿಕೊಂಡರೆ, ಇನ್ನೊಬ್ಬರ ಅಂತ್ಯಸಂಸ್ಕಾರ ಸರೂರು ಎಂಬ ಪುಟ್ಟ ಗ್ರಾಮದಲ್ಲಿ ನಡೆಯಿತು. ಬಾವನ ಅಂತ್ಯಸಂಸ್ಕಾರ ಬೆಳಗಾವಿಯಲ್ಲಿ ಆಯಿತು. ಬೆಳಗಾವಿಯ ಸದಾಶಿವನಗರದ ರುದ್ರಭೂಮಿ ವಿಶಾಲವಾದ ಜಾಗದಲ್ಲಿ ಇದೆ. ಗಿಡಮರಗಳು ಇವೆ. ಅಂತ್ಯಸಂಸ್ಕಾರಕ್ಕೆ ಸಾಕಷ್ಟು ಜಾಗಗಳು ಇವೆ. ಬಂಧುಗಳಿಗೆ ಕುಳಿತುಕೊಳ್ಳಲು ನೆರಳು ಇದೆ. ಮನೆಗೆ ಹೊರಡುವುದಕ್ಕಿಂತ ಮುಂಚೆ ಕೈಕಾಲು ತೊಳೆದುಕೊಳ್ಳಲು ನೀರಿನ ಸೌಕರ್ಯವಿದೆ. ಅಂತ್ಯಸಂಸ್ಕಾರ ನಡೆದರೆ ಇಂಥಲ್ಲಿ ನಡೆಯಬೇಕು ಎಂದು ಸಮಾಧಾನಪಡಬಹುದಾದ ಜಾಗವದು.

ರಾಮದುರ್ಗದಲ್ಲಿಯೂ ಆ ಊರಿಗೆ ತಕ್ಕಷ್ಟು ಸ್ಮಶಾನದ ಜಾಗವಿದೆ. ಖಾಸಗಿಯವರ ನೆರವಿನಿಂದ ಅಲ್ಲಿ ಗಿಡಮರಗಳು ಬೆಳೆದಿವೆ. ಅಂತ್ಯಸಂಸ್ಕಾರಕ್ಕೆ ಬಂದವರು ಕುಳಿತುಕೊಳ್ಳಲು ಕೆಲವರು ದಾನಿಗಳು ಸಿಮೆಂಟಿನ ಸೋಫಾಗಳನ್ನು ದಾನ ಮಾಡಿದ್ದಾರೆ. ಅವರ ಹೆಸರುಗಳು ಅದರ ಮೇಲೆ ಇರುವುದರಿಂದ ಇದು ಗೊತ್ತಾಗುತ್ತದೆ. ಅಂತ್ಯಸಂಸ್ಕಾರ ನಡೆಯುವ ಜಾಗದಿಂದ ಕೊಂಚ ದೂರದಲ್ಲಿ ಕುಳಿತುಕೊಳ್ಳಲು ಒಂದಿಷ್ಟು ಜಾಗ ಇದೆ. ಅಲ್ಲಿನ ಅನೇಕ ಸಿಮೆಂಟ್ ಸೋಫಾಗಳು ಕಿತ್ತುಕೊಂಡು ಬಂದಿವೆ. ಅಂತ್ಯಸಂಸ್ಕಾರ ನಡೆಯಲು ಇನ್ನಷ್ಟು ಒಳ್ಳೆಯ ಜಾಗವಿದ್ದರೆ ಉತ್ತಮವಿತ್ತು ಎನಿಸುವ ರುದ್ರಭೂಮಿಯಿದು. ಹಾಗೆ ನೋಡಿದರೆ ಇದಿಷ್ಟು ವ್ಯವಸ್ಥೆಯನ್ನು ಕೂಡ ಸ್ಥಳೀಯ ಕೆಲವರು ಗಣ್ಯರು ಕೂಡಿಕೊಂಡು ಮಾಡಿದ್ದಾರೆ. ಸರ್ಕಾರದ ಪಾತ್ರವೇನೂ ಅಲ್ಲಿ ಇದ್ದಂತೆ ಕಾಣಲಿಲ್ಲ.

ಸರೂರು ಗ್ರಾಮ ಇರುವುದು ವಿಜಯಪುರ ಜಿಲ್ಲೆಯ ಮುದ್ದೇಬಿಹಾಳ ತಾಲ್ಲೂಕಿನಲ್ಲಿ. ಚಿಕ್ಕ ಊರು. ಅಲ್ಲಿ ನನ್ನ ಚಿಕ್ಕ ಅಕ್ಕನ ಅಂತ್ಯಸಂಸ್ಕಾರ ನಡೆಯಿತು. ನನಗೆ ಹೋಗಲು ಆಗಲಿಲ್ಲ. ಒಂದು ದಿನ ಬಿಟ್ಟು ಅಸ್ಥಿ ಆರಿಸುವ ಸಮಯದಲ್ಲಿ ಅಲ್ಲಿಗೆ ಹೋದೆ. ಅಂತಿಮಸಂಸ್ಕಾರ ನಡೆದ ಜಾಗದ ಸುತ್ತಲೂ ಜಾಲಿ ಕಂಟಿಗಳು, ಕಲ್ಲುಗಳು, ಮುಳ್ಳುಗಳು, ಹಾಳು ಮಣ್ಣು. ಆ ಜಾಗಕ್ಕೆ ಚಪ್ಪಲಿ ಹಾಕಿಕೊಳ್ಳದೆ ಹೋಗಲು ಸಾಧ್ಯವೇ ಇರಲಿಲ್ಲ. ಅಸ್ಥಿ ಆರಿಸಿದ ಮೇಲೆ ಪಿಂಡ ಇಡುವುದು ರೂಢಿ. ಕಾಗೆಗಳು ಬಂದು ಪಿಂಡವನ್ನು ಮುಟ್ಟಿದರೆ ಅಥವಾ ಕಚ್ಚಿಕೊಂಡು ಹೋದರೆ ಮೃತರಿಗೆ ಯಾವುದೇ ಆಸೆಗಳು ಇರಲಿಲ್ಲ ಎಂದು ಅರ್ಥ. ಅಥವಾ ಹಾಗೆಂದು ಜನರು ನಂಬುತ್ತಾರೆ. ಇಡೀ ಸ್ಮಶಾನದಲ್ಲಿ ಒಂದೇ ಒಂದು ಮರವಿಲ್ಲ. ಪುಟ್ಟ ಪುಟ್ಟ ಜಾಲಿ ಕಂಟಿಗಳು ಮಾತ್ರ ಇವೆ. ಅವೂ ಎತ್ತರವಿಲ್ಲ. ಅಲ್ಲಿ ಕಾಗೆಗಳು ಎಲ್ಲಿಂದ ಬರಬೇಕು? ಅಕ್ಕನಿಗೆ ಇಟ್ಟ ಪಿಂಡ ತೆಗೆದುಕೊಂಡು ಹೋಗಲು ಕಾಗೆಗಳು ಬರಲಿಲ್ಲ. ಸ್ವಲ್ಪ ಹೊತ್ತು ಕಾಯ್ದು ನಮ್ಮ ಅಕ್ಕನ ಮೊಮ್ಮಗ ಅಸ್ಥಿ ತೆಗೆದುಕೊಂಡು ಕೃಷ್ಣಾ ನದಿಯಲ್ಲಿ ಬಿಡಲು ಹೋದ.

ನಮ್ಮ ಅಕ್ಕನಿಗೆ ಏನೂ ಆಸೆಗಳು ಇರಲಿಲ್ಲವೇ? ನಾನು ಕರೆ ಮಾಡಿದಾಗಲೆಲ್ಲ 'ಗೃಹಲಕ್ಷ್ಮಿ'ಯ ದುಡ್ಡು ಬಂದಿಲ್ಲ ಎಂದು ನನಗೆ ಹೇಳುತ್ತಿದ್ದಳು. 'ನಿನಗೆ ಏಕೆ ಹಣ ಬೇಕು' ಎಂದು ಕೇಳಿದರೆ 'ತಮ್ಮಾ ನನ್ನ ಹಣದಲ್ಲಿ ನಾನು ಬದುಕಬೇಕು' ಎನ್ನುತ್ತಿದ್ದಳು. ಈ ಸಾರಿ ಸರ್ಕಾರ ಕಳೆದ ಎರಡು ತಿಂಗಳಿಂದ ತನಗೆ ಹಣ ಹಾಕಿಲ್ಲ ಎಂದು ಆಕೆ ದೂರಿದಳು. 'ಬರುತ್ತದೆ ಬಿಡು' ಎಂದು ನಾನು ಸಮಾಧಾನ ಹೇಳಿದರೆ ಆಕೆಗೆ ನಂಬಿಕೆ ಬಂದಂತೆ ಕಾಣಲಿಲ್ಲ.


ಮುದ್ದೇಬಿಹಾಳ ಪಟ್ಟಣದ ವೀರಶೈವ ಲಿಂಗಾಯತ ಸಮಾಜದ ಸ್ಮಶಾನಭೂಮಿಯ ಸಂಗ್ರಹ ಚಿತ್ರ. ಉದ್ಯಾನದ ಸ್ವರೂಪ ಪಡೆದಿರುವ ಇಂಥ ಸ್ಮಶಾನಗಳು ಎಲ್ಲೆಡೆ ಇದ್ದರೆ ಅಂತಿಮಯಾತ್ರೆ ಗೌರವಯುತವೂ ಸಹನೀಯವೂ ಆಗಬಹುದು.